ಎಂ.ಸಿ. ಧನ್ಯತಾ, ಬೆಂಗಳೂರು
ತಾಳಿ ಕಟ್ಟುವ ಸಮಯವನ್ನು 'ಅಮೃತ ಗಳಿಗೆ' ಎಂದು ಕರೆಯುವುದೇಕೆ?



ಅದರ ಮೂಲರೂಪ 'ಅನೃತ ಗಳಿಗೆ'. 'ಸಾವಿರ ಸುಳ್ಳುಹೇಳಿ ಒಂದು ಮದುವೆ ಮಾಡು' ಅನ್ನೋ ಗಾದೆಯೇ ಆಧಾರ.

ಅಮರಯ್ಯಾ ಪತ್ರಿಮಠ, ಸುರಪುರ
ಜೀವನ ಒಂದು ಕಥೆಯೋ ಧಾರಾವಾಹಿಯೋ ಕಾವ್ಯವೋ?
ಯೌವನದವರೆಗೆ ಕಾವ್ಯ, ವಿವಾಹದ ನಂತರ ಕಥೆ; ವೃದ್ಧಾಪ್ಯದಲ್ಲಿ ಕೊನೆಗಾಣದ ಧಾರಾವಾಹಿ.

ದಿನೇಶ್, ಗುಡ್ಡದೂರು
ದೇವಸ್ಥಾನಗಳಲ್ಲಿ ಕಾಣಿಕೆಯನ್ನು ಹುಂಡಿಯಲ್ಲೇ ಹಾಕಿ ಎಂಬ ಫಲಕವಿರುತ್ತದೆ. ಏಕೆ?
ಹುಂಡಿಯ ಅಕ್ಕಪಕ್ಕದಲ್ಲಿ ಹಾಕಿದರೆ ಭಕ್ತರ ಕಿಸೆಯೇ ಹುಂಡಿಯಾಗುವುದೆಂದು.

ಬಾ.ರಂ. ಸುರೇಶ್, ಶಿವಮೊಗ್ಗ
'ಸತ್ತರೂ ನಿನ್ನನ್ನೇ ಪ್ರೀತಿಸುತ್ತೇನೆ, ಎಂದೆಂದೂ ಮರೆಯಲಾರೆ' ಎಂಬ ಪ್ರೇಮಿಗಳ ಮಾತು ಏನನ್ನು ತಿಳಿಸುತ್ತದೆ?



ಪರಿಶುದ್ಧವಾದ ಭ್ರಮೆಯನ್ನು.

ಮಲ್ಲಿಕಾರ್ಜುನ, ಸುರಧೇನುಪುರ
ಆಟದಲ್ಲಿ ಸೋತವರು ಸಾಮಾನ್ಯ; ಗೆದ್ದವರು ಮಾನ್ಯ. ಪ್ರೇಕ್ಷಕರು?
ಮಾನದಂಡ ಹಿಡಿದ ಬಹುಮಾನ್ಯರು.

ಬೂಕನಕೆರೆ ವಿಜೇಂದ್ರ, ಮೈಸೂರು
ಆಫೀಸಿನಲ್ಲಿ ಕೆಲಸ ಮಾಡುವ ಹೆಂಗಸರೇಕೆ ಆಗಾಗ್ಗೆ ಆಕಳಿಸುತ್ತಾರೆ?
ಅದು ಅವರ ಸಹೋದ್ಯೋಗಿಗಳ ಬಗ್ಗೆ ಮಾಡುವ ವಿಮರ್ಶೆ.

ಎಂ.ಜಿ. ಉಮಾ, ಬಳ್ಳಾರಿ
ಹೆಣ್ಣುಮಕ್ಕಳು ಸಂಸಾರಕ್ಕೆ ಆಭರಣ ಇದ್ದಂತೆ. ಗಂಡುಮಕ್ಕಳು?
ಅವುಗಳ ಸೇಫ್ ಡಿಪಾಸಿಟ್ ಲಾಕರ್ಸ್ ಇದ್ದಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಚಿಂತೆಗೂ ಮಿತಿ ಇದೆಯೆ?
ಹೂಂ. ಎರಡು ನಿದ್ರೆಗಳ ನಡುವಿನ ಸಮಯದಲ್ಲಿ ಮಾತ್ರ ಚಿಂತೆಗೆ ಅವಕಾಶ.

ನಖಾತೆ ಆನಂದರಾವ್, ಮೈಸೂರು
ಕಾಲಕ್ಕೆ ತಕ್ಕಂತೆ ಬದಲಾಗು ಎನ್ನುವುದರ ಅಂತರಾರ್ಥವೇನು?
ಟೋರ್ನ್ ಜೀನ್ಸ್‌ಗಳ ನಡುವೆ ಪಂಚೆ ಉಟ್ಟವನೇ ದಡ್ಡ ಎಂದು.

ಬಿ. ಚಂದ್ರೇಗೌಡ, ಬೆಂಗಳೂರು
ಕೋಮು ಸೌಹಾರ್ದದ ದೀಪ ಹಚ್ಚಬೇಕಾದೆಡೆಯಲ್ಲಿ ದ್ವೇಷದ ಬೆಂಕಿ ಉರಿಸಿದರೆ ಏನು ಗತಿ?
ರಾಜಕಾರಣಿಗಳಿಗೆ ಶುಕ್ರದೆಸೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹೆಂಗಸರಿಗೆ ಕಟ್ಟುವ ತಾಳಿ ಯಾವುದರ ಸಂಕೇತ?
ಸಂಸಾರಪಥಕ್ಕೆ ಬರಲು ಧೈರ್ಯ ಮಾಡಿದ್ದಕ್ಕೆ ನೀಡುವ ಬ್ರೇವರಿ ಅವಾರ್ಡ್.

ಚಾಪಲ್ಮನೆ ಸುರೇಶ್ ನಾಯಕ್, ಕೊಪ್ಪ
ಖಾಕಿ, ಕಾವಿ, ಖಾದಿಗಳಲ್ಲಿ ಹೆಚ್ಚು ನಂಬಿಕೆ ಇಡಬಹುದಾದ ಉಡುಪು ಯಾವುದು?
ಹುಚ್ಚಪ್ಪ! ನಂಬಿಕೆ ಕಳೆದುಕೊಂಡಿರುವುದು ಉಡುಪಲ್ಲ, ಉಡುಪಿನೊಳಗಿನ ಕೊಳಕರು.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ನೀವು ಮನೆಯಲ್ಲಿ ನಿಮ್ಮ ಹೆಂಡತಿಗೆ ಹುಲಿಯೋ ಇಲಿಯೋ ರಾಮ್‌ಜಿ?
ಗೋಲ್ಡನ್ ರಿಟ್ರೀವರ್.

ಮಲ್ಲಿಕಾರ್ಜುನ, ಸುರಧೇನುಪುರ
ಆಪತ್ತಿಗಾದವನೇ ನೆಂಟ. ಸಂಪತ್ತಿದ್ದಾಗ ಬಂದು ಹೋದವನು?
ತಾತ್ಕಾಲಿಕ ಬಂಟ.

## ವಾರದ ಪ್ರಶ್ನೆ

ಜೀವೀ, ಗೊಂಡೇದಹಳ್ಳಿ
ರಸ್ತೆ ಅಪಘಾತಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳಿಗಿಂತ ಮನುಷ್ಯರೇ ಹೆಚ್ಚಾಗಿ ಸಾಯುತ್ತಿದ್ದಾರಲ್ಲ?
ತಿಳಿಯಿತಲ್ಲ – ಪ್ರಾಣಿಗಳಿಗಿರುವಷ್ಟು ರೋಡ್ ಸೆನ್ಸ್ ಮನುಷ್ಯರಿಗಿಲ್ಲ.

ರಾಜಶೇಖರ ಹಾದಿಮನಿ, ನವಿಲೂರು
ಆಸ್ತಿ ಕಬಳಿಸಲು ಹುಡುಗನ ಮದುವೆ ಮಾಡಿ, ಅದು ಸಿಗದಿದ್ದಕ್ಕೆ ಸಂಬಂಧ ಕೇಡು ಅನ್ನುವರಲ್ಲ?
ಸರಿಯೇ. ಹುಡುಗ ತಾಳಿ ಕಟ್ಟಿದ್ದು ವಧುವಿಗಲ್ಲ, ಆಸ್ತಿಗೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ರಾಜ್ಯದ ಮೂರೂ ಪಕ್ಷಗಳು ತಮಗೆ 150 ಸೀಟ್ ಬರುತ್ತವೆನ್ನುತ್ತಿದ್ದಾರೆ. ಒಟ್ಟು 450 ಕ್ಷೇತ್ರಗಳಿವೆಯೆ?
ಸ್ಕೂಲ್ ಪರೀಕ್ಷೆಗಳಲ್ಲೂ 'ಮ್ಯಾಥ್ಸಲ್ಲಿ 100' ಎನ್ನುತ್ತಿದ್ದರಂತೆ; ಯಾವುದಾದರೂ ಒಂದು ಅಂಕಿ ಗಾಯಬ್.

ಮಹೇಶ್ವರ, ಬಾಚಿಗೊಂಡನಹಳ್ಳಿ
ಮುಂಜಾನೆ ಹಾಲಿಗೆ ನೀರು ಬೆರೆತಿದೆಯೆಂದು ಗೊಣಗುವವರು ಸಂಜೆ ಆಲ್ಕೋಹಾಲಿಗೆ ನೀರು ಬೆರೆಸುವರಲ್ಲಾ?



ಹಾಲು ಪವಿತ್ರ; ಮದ್ಯ ಕೊಳಕು. ಕೊಳಕನ್ನು ಜಲ ಪ್ರೋಕ್ಷಿಸಿ ಒಳ ಬಿಟ್ಟುಕೊಳ್ಳುವುದು ಪದ್ಧತಿ.

ಶಿವಮೊಗ್ಗ ರಮೇಶ್, ಮೈಸೂರು
ಹೆಂಡತಿಗೂ ಪ್ರೇಯಸಿಗೂ ವ್ಯತ್ಯಾಸವೇನು?
ಪ್ರೇಯಸಿ ಡಿಲೀಟ್ ಆಗಬಲ್ಲ ಟೆಂಪೊರರಿ ಫೈಲ್. ಹೆಂಡತಿ ಪರ್ಮನೆಂಟ್ ಪ್ರೋಗ್ರಾಂ ಫೈಲ್.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ತಮ್ಮ ಕೃತಿಗಳೆಲ್ಲ ಶ್ರೇಷ್ಠ, ವಿರೋಧ ಇರಕೂಡದೆಂದು ರಣಸಾಹಿತಿಗಳ ಹಟ. ಅರ್ಹತೆ ಅಂಕದ ನಿರ್ಧಾರ ಓದುಗರದಲ್ಲವೆ?
ಊಹೂಂ. ಪೇಯ್ಡ್ ವಿಮರ್ಶಕರದ್ದು. ಯತ್ರ ಕಾಂಚಾಣಸ್ತು ಪೂಜ್ಯಂತೆ ರಮಂತೇ ತತ್ರ ಕೃತಿವೇಶ್ಯಾ!

■ ರಾಮ್